ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 18-30.
©*IIMRD*, Mysuru
IIMRD JOURNALS
www.iimrd.com

# ಪಣಿಯನ್ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ

**ಡಾ. ಬಿ.ಆರ್. ಮಂಜುನಾಥ[1] ಮತ್ತು ಡಾ.ರವಿಕುಮಾರ ಎಸ್[2]**
[1]ರೀಸರ್ಚ್ ಇನವೆಸ್ಟಿಗೇಟರ್, [2]ಸಂಶೋಧನಾ ಸಹಾಯಕರು
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.

**ಸಾರಾಂಶ: (Abstract)**

*ಪಣಿಯನ್ ಬುಡಕಟ್ಟು ಸಮುದಾಯವು ಅರಣ್ಯವಾಸಿ ಸಮುದಾಯಗಳಲ್ಲಿ ಪ್ರಮುಖವಾಗಿದೆ. ಈ ಸಮುದಾಯ ಕೇರಳದ ಪಾಲಕ್ಕಾಡ್, ಕೋಯಿಕ್ಕೋಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿಯೂ, ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲೂ, ಹಾಗೂ ತಮಿಳು ನಾಡಿನ ನೀಲಗಿರಿ ಜಿಲ್ಲೆಗಳಲ್ಲೂ ಕಂಡು ಬರುತ್ತದೆ. ಇವರು ತಮ್ಮದೇ ಸ್ವಂತ ಭಾಷೆಯನ್ನು ಹೊಂದಿದ್ದಾರೆ. ಏಕಪತ್ನಿತ್ವ, ಪಿತೃಪ್ರಧಾನ ಕುಟುಂಬ ಪದ್ಧತಿಯನ್ನು ಅನುಸರಿಸುವ ಇವರಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆ. ಆಸ್ತಿಯ ಉತ್ತರಾಧಿಕಾರ ತಂದೆಯಿಂದ ಗಂಡು ಮಕ್ಕಳಿಗೆ ವರ್ಗಾವಣೆಯಾಗುತ್ತದೆ. ಪ್ರಕೃತಿ ಆರಾಧಕರಾದ ಇವರು 'ಕಾಳಿ'ಯನ್ನು ಪ್ರಮುಖವಾಗಿ ಪೂಜಿಸುತ್ತಾರೆ. ಆತ್ಮದ ಪರಿಕಲ್ಪನೆ ಇವರಲ್ಲಿದೆ. ಪ್ರಸ್ತುತ ಲೇಖನವು ಸಂಶೋಧನಾ ಲೇಖನವಾಗಿದ್ದು, ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಕ್ಷೇತ್ರಾಧ್ಯಯನ ಕೈಗೊಂಡು ಅವಲೋಕನ, ಸಂದರ್ಶನ, ಗುಂಪುಚರ್ಚೆ, ಪ್ರಕರಣ ಅಧ್ಯಯನ ವಿಧಾನಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.*

**ಮುಖ್ಯಪದಗಳು (Keywords):** ಬುಡಕಟ್ಟು ಸಮುದಾಯ, ಪಣಿಯನ್, ಜೀತ ಕಾರ್ಮಿಕರು, ಕೂಲಿ ಕಾರ್ಮಿಕರು.

## ಪೀಠಿಕೆ

ಪಣಿಯನ್ ಸಮುದಾಯದವರು ಪ್ರಧಾನವಾಗಿ ಕೇರಳ ರಾಜ್ಯದಲ್ಲಿ ನೆಲೆಸಿದ್ದು, ಇಲ್ಲಿಂದ ಕರ್ನಾಟಕದ ಕೊಡಗು ಮತ್ತು ಮೈಸೂರು ಹಾಗೂ ತಮಿಳು ನಾಡಿನ ನೀಲಗಿರಿ ಜಿಲ್ಲೆಯ ಭಾಗಗಳಲ್ಲಿ ಚದುರಿಕೊಂಡಿದ್ದಾರೆ. ಮೂಲತಃ ಜೀತಕಾರ್ಮಿಕರಾದ ಇವರು, ಇಂದಿಗೂ ಕಾಫೀ ಮತ್ತು ಚಹ ತೋಟಗಳಲ್ಲಿ ದುಡಿಯುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಬೆರಳೆಣಿಕೆ ಮಂದಿ ಅರಣ್ಯ ಇಲಾಖೆಗಳಲ್ಲಿ ಮಾವುತರಾಗಿ, ಕೂಲಿ ಕಾರ್ಮಿಕರಾಗಿ, ಅರಣ್ಯ ವೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಹೆಸರು ಮತ್ತು ಅನನ್ಯತೆ

ಪಣಿಯನ್ ಬುಡಕಟ್ಟು ಸಮುದಾಯದವರನ್ನು ಪನಿಯ, ಪನಿಯನ್, ಪಣಿ, ಪನಿ, ಪಣಿಯಾರ್, ಪಣಿಯರು, ಪಣಿಯ, ಮುಂತಾದ ಹೆಸರಗಳಿಂದ ಕರೆಯುತ್ತಾರೆ. ಕರ್ನಾಟಕದಲ್ಲಿ ಇವರನ್ನು ಯೆರವ (ಪಣಿ

*Please cite this article as: ಹರೀಶ ಎನ್. ಮತ್ತು ಕೆ. ತಿಮ್ಮಯ್ಯ.* (2024). 'ಮನವಿಲ್ಲದವರ ಮಧ್ಯೆ' ಬೆಂದ ಬದುಕಿನ ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(5). ಪು.ಸಂ.* 18–30

ಯೆರವ) ಎಂದು ಗುರುತಿಸಲಾಗುತ್ತದೆ. ಪಣಿಯ ಎಂಬ ಪದವು 'ಕೆಲಸ ಮಾಡುವವನು' ಅಥವಾ 'ಕೂಲಿ ಕಾರ್ಮಿಕ' ಎಂಬ ಅರ್ಥವನ್ನು ಕೊಡುತ್ತದೆ. ಇನ್ನೊಂದು 'ಅರ್ಥದಲ್ಲಿ ಪಣಿ' ಎಂಬ ಪದಕ್ಕೆ 'ಬೆಟ್ಟದ ಬದಿ', 'ಬೆಟ್ಟದ ತಪ್ಪಲು' ಎಂಬ ಅರ್ಥವೂ ಇದೆ. ಪಣಿಯನ್ನರು ಮೂಲತಃ ಕೇರಳದ ವೈನಾಡಿನ ಬೆಟ್ಟ ಪ್ರದೇಶಗಳಲ್ಲಿ ವಾಸಿಸುತ್ತಿದ್ದರಿಂದ ಈ ಹೆಸರು ಬಂದಿರಬಹುದು.

**ಮೂಲ ಮತ್ತು ಇತಿಹಾಸ**

ಪಣಿಯನ್ ಸಮುದಾಯದವರು ಕೇರಳದ 'ಇಪ್ಪಿಮಲೆ' ಎಂಬ ಬೆಟ್ಟದ ತುದಿಯಿಂದ ಬಂದವರು ಎಂದು ಹೇಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಪೌರಾಣಿಕ ಕಥೆಯೊಂದಿದೆ. 'ಇಪ್ಪಿಮಲೆ' ಬೆಟ್ಟದಲ್ಲಿ 'ತಂಬೀರ' ಎಂಬ ರಾಜ ಕೃಷಿ ಮಾಡಿಕೊಂಡು ವಾಸಿಸುತ್ತಿದ್ದನು. ಒಮ್ಮೆ ಕಾಡಿನಲ್ಲಿ ಬೆತ್ತಲೆಯಾಗಿ ಅಲೆಯುತ್ತಿದ್ದ ಅಣ್ಣ–ತಂಗಿಯರನ್ನು ಕಂಡು ತನ್ನ ತೋಟದಲ್ಲಿ 'ತಂಬೀರ' ಕೆಲಸ ಕೊಟ್ಟನು. ಬೆತ್ತಲೆಯಾಗಿದ್ದ ಅವರಿಗೆ ಧರಿಸಲು ಏಳು ಮೊಳೆ ಬಟ್ಟೆ ಕೊಟ್ಟನು. ಆದರೆ ಇಬ್ಬರಿಗೆ ಅದು ಸಾಕಾಗುತ್ತಿರಲಿಲ್ಲವಾದ ಕಾರಣ ತಂಬೀರ ಹೆಂಡತಿ ಮತ್ತೆ ಏಳು ಮೊಳೆ ಬಟ್ಟೆಕೊಟ್ಟಳು. ಇಬ್ಬರೂ ತಮ್ಮ ಸೊಂಟದಿಂದ ಕೆಳಕ್ಕೆ ಬಟ್ಟೆಗಳನ್ನು ಕಟ್ಟಿಕೊಂಡರು. ಅಂದಿನಿಂದ ಅವರು ತಂಬೀರನ ಮನೆಯ ಜೀತದಾಳುಗಳಾದರು. ವಯಸ್ಸಿಗೆ ಬಂದ ಇವರಿಗೆ ತಂಬೀರ ಮದುವೆ ಮಾಡಲು ನಿಶ್ಚಯ ಮಾಡಿಕೊಂಡನು. ಆದರೆ ಇವರನ್ನು ಇತರೆ ಸಮುದಾಯದ ಜೀತದಾಳುಗಳು ಮದುವೆಯಾಗಲು ಒಪ್ಪಲಿಲ್ಲ. ಆಗ ತಂಬೀರನು ನಿಮ್ಮ ವಂಶ ಬೆಳೆಯಲು ನೀವಿಬ್ಬರು "ಸೊಂಟದಿಂದ ಕೆಳಕ್ಕೆ ಸತಿಪತಿಗಳಾಗಿಯೂ ಸೊಂಟದಿಂದ ಮೇಲಕ್ಕೆ ಅಣ್ಣತಂಗಿಯರಾಗಿಯೂ ಬಾಳಿ" ಎಂದು ಆಜ್ಞಾಪಿಸಿದನು. ಅದರಂತೆ ಅವರು ಬಾಳಿದರು. ಅವರೇ 'ಅಂಜಿಲಾತು ಅಪ್ಪೆಮುತ್ತಿ' (ಗಂಡು) ಮತ್ತು 'ಪಾಪಲಾತ್ತು ಅಮ್ಮೆಮುತ್ತಿ' (ಹೆಣ್ಣು). ಅವರಿಗೆ ಐವರು ಗಂಡು ಮತ್ತು ಐವರು ಹೆಣ್ಣು ಮಕ್ಕಳಾದವು. ಇವರಿಂದಲೇ ಪಣಿಯನ್ ಸಮುದಾಯ ಬೆಳೆವಣಿಗೆಯಾಯಿತು ಎಂದು ಹೇಳುತ್ತಾರೆ. ಅಂಜಿಲಾತು ಅಪ್ಪೆಮುತ್ತಿ' ಮತ್ತು 'ಪಾಪಲಾತ್ತು ಅಮ್ಮೆಮುತ್ತಿ' ತಮ್ಮ ಮೂಲ ಪುರುಷರು ಎಂದು ಹೇಳುತ್ತಾರೆ.

ಇನ್ನೊಂದು ಕಥೆಯ ಪ್ರಕಾರ ವಯಸ್ಸಾದ ಹೆಳವ ಮಹಿಳೆ (ಅಂಜಿಲ ಮುತ್ತಿ) ನಡೆದಾಡಲು ಸಾಧ್ಯವಾಗದೆ ಒಂದೆಡೆ ಕುಳಿತಿದ್ದಳು. ಆಕೆಯ ಸ್ಥಿತಿಯನ್ನು ನೋಡಿದ ಶಿವ ಮರುಕಪಟ್ಟು 'ಮುದುಕಿಯಾದ ನೀನು ಯುವಕ–ಯುವತಿಯಾಗಿ ಮಾರ್ಪಟ್ಟು 'ಇಪ್ಪಿಮಲೆ'ಯಲ್ಲಿ ಚಿರಂಜೀವಿಯಾಗಿ ಬದುಕು ಎಂದು ಹರಸುತ್ತಾನೆ. ಹೀಗೆ ಯುವಕ ಯುವತಿಯರಾಗಿ ಮಾರ್ಪಟ್ಟು ಇಪ್ಪಿಮಲೆಯಲ್ಲಿ ಅಡ್ಡಾಡುತ್ತಿದ್ದ ಸಂದರ್ಭದಲ್ಲಿ ಇವರನ್ನು ನೋಡಿದ 'ತಂಬೀರ' ರಾಜನು ತನ್ನ ತೋಟಕ್ಕೆ ಕರೆದುಕೊಂಡು ಬಂದು ವಾಸಿಸಲು ಮನೆ ಮತ್ತು ಉಡಲು 14 ಮೊಳೆ ಬಟ್ಟೆಯನ್ನು ಕೊಡುತ್ತಾನೆ. ಆ ಬಟ್ಟೆಯನ್ನು ಅವರಿಬ್ಬರೂ ಎರಡು ತುಂಡು ಮಾಡಿ ಮೈಗೆ ಸುತ್ತಿಕೊಳ್ಳುತ್ತಾರೆ. ಅವರಿಗೆ ಮದುವೆ ವಯಸ್ಸು ಬಂದಾಗ ಯಾರೂ ಕೂಡ ಮದುವೆಯಾಗಲು ಸಿದ್ದರಿರಲಿಲ್ಲ. ಆದುದರಿಂದ ಅವರು ಸೊಂಟದಿಂದ ಕೆಳಗೆ ಗಂಡ ಹೆಂಡತಿಯರಾಗಿ ಸೊಂಟದಿಂದ ಮೇಲಕ್ಕೆ ಅಣ್ಣ ತಂಗಿಯರಾಗಿಯೂ ಇರಲು ತೀರ್ಮಾನಿಸಿದರು. ಹೀಗೆ ಪಣಿಯ ಸಮುದಾಯದವರ ವಂಶ ಬೆಳೆಯತೊಡಗಿತು. ಈ ಸಮುದಾಯದ ಹುಟ್ಟಿಗೆ ಕಾರಣಳಾದ "ಅಂಜಿಲ ಮುತ್ತಿ"ಯು ಇವರ ದೇವತೆಯಾಗಿ ಇಪ್ಪಿಮಲೆಯಲ್ಲಿ ನೆಲೆಸಿದ್ದಾರೆ ಎಂದು ಹೇಳುತ್ತಾರೆ. ಪಣಿಯನ್ ಸಮುದಾಯದ ದಂತಕಥೆ

ಮತ್ತು ಐತಿಹ್ಯ ಗಮನಿಸಿದಾಗ ಈ ಸಮುದಾಯವನ್ನು ಬಲಾಢ್ಯ ವರ್ಗವೊಂದು ಊಟ–ಬಟ್ಟೆ–ವಸತಿಯನ್ನು ಕೊಟ್ಟು ತಮ್ಮ ಹಿಡಿತದಲ್ಲಿಟ್ಟುಕೊಂಡು ವಂಶಪಾರಂಪರ್ಯವಾಗಿ ದುಡಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ

**ಕೋಷ್ಟಕ 1: ಪಣಿಯನ್ ಬುಡಕಟ್ಟು ಸಮುದಾಯದ ಜನಸಂಖ್ಯೆ ವಿವರ (2011 ಜನಗಣತಿ)**

| ಪ್ರದೇಶ | ಗಂಡು | ಹೆಣ್ಣು | ಒಟ್ಟು |
|---|---|---|---|
| ಗ್ರಾಮೀಣ ಪ್ರದೇಶ | 229 | 249 | 478 |
| ನಗರ ಪ್ರದೇಶ | 8 | 9 | 17 |
| **ಒಟ್ಟು** | **237** | **258** | **495** |

ಕೋಷ್ಟಕ 1 ರಲ್ಲಿ ಕರ್ನಾಟಕದ ಪಣಿಯನ್ ಬುಡಕಟ್ಟು ಸಮುದಾಯದ ಜನಸಂಖ್ಯೆ ವಿವರವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ರಾಜ್ಯದಲ್ಲಿ ಒಟ್ಟು 495 ಪಣಿಯನ್ ಜನಸಂಖ್ಯೆ ಇದೆ. ಪಣಿಯನ್ ಸಮುದಾಯದವರಿಗೆ **'ಯೆರವ'** ಪರಿಶಿಷ್ಟ ಬುಡಕಟ್ಟು ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿರುವುದ್ದರಿಂದ ಇವರ ಜನಸಂಖ್ಯೆ ಕಡಿಮೆಯಿದೆ. ಜಾತಿ ಪ್ರಮಾಣಪತ್ರವನ್ನು ಯೆರವ ಹೆಸರಿನಲ್ಲಿ ನೀಡುತ್ತಿರುವುದ್ದರಿಂದ ಜನಗಣತಿ ಸಂದರ್ಭದಲ್ಲಿ **'ಯೆರವ'**[1] ಎಂದು ಬರೆಯಿಸಿಕೊಳ್ಳುತ್ತಿದ್ದಾರೆ.

**ವಾಸಿಸುವ ಪ್ರದೇಶಗಳು**

ಪಣಿಯನ್ ಬುಡಕಟ್ಟು ಸಮುದಾಯದವರು ರಾಜ್ಯದಲ್ಲಿ ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಇವರು ಕೊಡಗು ಜಿಲ್ಲೆಯ ವಿರಾಜಪೇಟೆ, ಸೋಮವಾರ ಪೇಟೆ, ಮಡಿಕೇರಿ ತಾಲೂಕು ಹಾಗೂ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಸೇರಿದಂತೆ 57 ಹಾಡಿಗಳಲ್ಲಿ ವಾಸಿಸುತ್ತಿದ್ದಾರೆ. (ಕೋಷ್ಟಕ 2). ಇಲ್ಲಿ ವಾಸಿಸುವ ಪಣಿಯನ್ ಬುಡಕಟ್ಟು ಸಮುದಾಯದವರಿಗೆ **'ಯೆರವ'** ಪರಿಶಿಷ್ಟ ಪಂಗಡ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ.

**ಕುಟುಂಬ ವ್ಯವಸ್ಥೆ**

ಪಣಿಯನ್ ಬುಡಕಟ್ಟು ಸಮುದಾಯದದಲ್ಲಿ ಕುಟುಂಬದ ಪಾತ್ರ ಪ್ರಮುಖವಾದುದಾಗಿದೆ. ಇವರಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಕಂಡು ಬರುತ್ತದೆಯಾದ್ದರಿಂದ ಮನೆಯ ಯಜಮಾನ ತಂದೆಯಾಗಿರುತ್ತಾನೆ. ಪಣಿಯನ್‌ರಲ್ಲಿ ವಿಭಕ್ತ ಕುಟುಂಬಗಳ ಪ್ರಮಾಣ ಅಧಿಕವಾಗಿದೆ. ಕುಟುಂಬದಲ್ಲಿ ಗಂಡ–ಹೆಂಡತಿ ಮತ್ತು ಮದುವೆಯಾಗದ ಮಕ್ಕಳು ವಾಸಿಸುತ್ತಾರೆ. ಮಕ್ಕಳಿಗೆ ಮದುವೆಯಾದ ನಂತರ

[1] *ಹಿಂದಿನ ಅನೇಕ ಅಧ್ಯಯನಗಳಲ್ಲಿ ಗುರುತಿಸಿರುವಂತೆ 'ಯೆರವ' ಎಂಬುದು ಪ್ರತ್ಯೇಕ ಬುಡಕಟ್ಟು ಸಮುದಾಯವಲ್ಲ ಬದಲಿಗೆ ಪಂಜಿರಿ, ಪಣಿಯ, ಬಡಗ ಮತ್ತು ಕಾಜಿ/ಕಾಗೆ ಎಂಬ ಬುಡಕಟ್ಟು ಸಮುದಾಯಗಳ ಸಮುಚ್ಚಯವಾಗಿದೆ. ಪ್ರಸ್ತುತ ಕಾಜಿ/ಕಾಗೆ ಯೆರವರು ಎಲ್ಲಿಯೂ ಕಂಡು ಬರುವುದಿಲ್ಲ. ಇವರು ಪಣಿಯ ಬುಡಕಟ್ಟು ಸಮುದಾಯದೊಂದಿಗೆ ವಿಲೀನಗೊಂಡಿರುವ ಸಾಧ್ಯತೆಯಿದೆ. ಪಂಜಿರಿ ಯೆರವರು ಕೇರಳದಲ್ಲಿ ಕಂಡು ಬರುವ ಅಡಿಯನ್ ಬುಡಕಟ್ಟು ಸಮುದಾಯವಾಗಿದೆ. ಕರ್ನಾಟಕದಲ್ಲಿ ಅಡಿಯನ್ ಮತ್ತು ಪಣಿಯನ್ ಬುಡಕಟ್ಟು ಸಮುದಾಯಗಳ ಪ್ರತ್ಯೇಕವಾಗಿದ್ದರೂ ಕೂಡ ಈ ಎರಡು ಸಮುದಾಯಗಳನ್ನು 'ಯೆರವ' ಎಂದು ಗುರುತಿಸಲಾಗಿದೆ. ಏಕೆಂದರೆ ಅಡಿಯ, ಪಣಿಯ, ಯೆರವ ಎಲ್ಲಾ ಪದಗಳ ಅರ್ಥ ಹೆಚ್ಚು ಕಡಿಮೆ ಕೂಲಿಗಾಗಿ ದುಡಿಯುವವ, ಕೆಲಸಗಾರ, ಕಾರ್ಮಿಕ, ಅಡಿಯಾಳು, ಜೀತಗಾರ ಎಂಬ ಪದಗಳಿಗೆ ಸಂವಾದಿಯಾಗಿದೆ.*

ನವದಂಪತಿಗಳು ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸುತ್ತಾರೆ. ಕುಟುಂಬದಲ್ಲಿ ಪ್ರತಿಯೊಂದು ನಿರ್ಧಾರವನ್ನು ಮನೆಯ ಯಜಮಾನ ತೆಗೆದುಕೊಳ್ಳುತ್ತಾನೆ.

**ಕೋಷ್ಟಕ 2: ಪಣಿಯನ್ ಬುಡಕಟ್ಟು ಸಮುದಾಯದವರು ವಾಸಿಸುವ ಪ್ರಮುಖ ಹಾಡಿಗಳ ವಿವರ**

| ಕ್ರ.ಸಂ. | **ವಿರಾಜಪೇಟೆ** | ಕ್ರ.ಸಂ. | |
|---|---|---|---|
| 1 | ಅಂಚೆತಿಟ್ಟು | 31 | ಮಾಕುಟ್ಟ |
| 2 | ಆಯಿರಸುಳಿ | 32 | ಮೂರ್ಕಲು |
| 3 | ಭದ್ರಗೋಳ | 33 | ಕೊಳಂಗೆರೆ |
| 4 | ಬೇಗೂರು | 34 | ಕಲ್ಲಹಳ್ಳ |
| 5 | ಬೆಂಡೆಗುತ್ತಿ | 35 | ಸಿದ್ದಾಪುರ ಹಡ್ಲು |
| 6 | ಚೀನಿಹಡ್ಲು | 36 | ಚಂದನಕೆರೆ |
| 7 | ದೊಡ್ಡಹಡ್ಲು | 37 | ಕೊಡಂಗೆ |
| 8 | ಎಡತೋರೆ | 38 | ಲಕ್ಕುಂದ |
| 9 | ಜಂಗಲಾಡಿ | 39 | ಗೋಣಿಗದ್ದೆ |
| 10 | ಕಲ್ತೋಡು | 40 | ಚೂರಿಕಾಡು |
| 11 | ನೋಕ್ಯಾ ಸಿದ್ದಾಪುರ | 41 | ಕೇಂಬುಕೊಲ್ಲಿ |
| 12 | ಬೊಂಬುಕಾಡು | 42 | ನಾಣಚ್ಚಿ |
| 13 | ಕೋತೂರು | 43 | ಸಿಂಕೋನ |
| 14 | ಪಾಲದಹಳ್ಳ | 44 | ಆಲಂದೋಡು |
| 15 | ಕುಂಬಾರಕಟ್ಟೆ | **ಮಡಿಕೇರಿ ತಾಲೂಕು** | |
| 16 | ನಲ್ಲೂರು | 45 | ಪಾಲೆಮಾಡು |
| 17 | ಬೀಳೂರು | 46 | ಮಕ್ಕಂದೂರು ಮುಕೊಡ್ಲು |
| 18 | ಬೆಕ್ಕೆಸೊಡ್ಲೂರು–2 ರಾಮಕಾಲೋನಿ | 47 | ನರಿಯಂದಡ |
| 19 | ಮತ್ತೂರು | **ಸೋಮವಾರಪೇಟೆ ತಾಲೂಕು** | |
| 20 | ಅರವತೊಕ್ಕಲು | 48 | ನೆಲ್ಲಿಹುದಿಕೇರಿ |
| 21 | ಕಾರೇಕಾಡು | 49 | ಅಭ್ಯತ್ ಮಂಗಲ |
| 22 | ಸೀತಾಕಾಲೋನಿ | 50 | ತ್ಯಾಗತ್ತೂರು |
| 23 | ಚಿಮಟಿಗುಂಡಿ(ಕುಂದಾ) | 51 | ವಾಲ್ನೂರು |
| 24 | ಕಳತ್ ಮಾಡು | 52 | ನಂಜರಾಯಪಟ್ಟಣ |
| 25 | ಬಣ್ಣನಮೊಟ್ಟೆ | 53 | ಹೊಸಪಟ್ಟಣ |
| 26 | ಶ್ರೀಮಂಗಲ | **ಹೆಚ್.ಡಿ. ಕೋಟೆ ತಾಲೂಕು (ಮೈಸೂರು ಜಿಲ್ಲೆ** | |
| 27 | ಕುರ್ಚಿ | 54 | ಸೇಬಿನ ಕೊಲ್ಲಿ |
| 28 | ಒಡಿಬೈಲು | 55 | ಆನೆಮಾಳ |
| 29 | ಬೀರುಗ | 56 | ಬ್ರಹ್ಮಗಿರಿ ಹಾಡಿ (ಕನ್ನಡ ಪಣಿಯನ್) |
| 30 | ಕಾಟಿಗುಂಡಿ | 57 | ಬೀರಂಬಳ್ಳಿ (ಕನ್ನಡ ಪಣಿಯನ್) |

**ಕುಲ ವ್ಯವಸ್ಥೆ**

ಪಣಿಯನ್ ಸಮುದಾಯದಲ್ಲಿ ತಂದೆಯಿಂದ ಕುಲವನ್ನು ಗುರುತಿಸಲಾಗುತ್ತದೆ. ವಿವಾಹದಲ್ಲಿ ಕುಲದ ಪಾತ್ರ ಪ್ರಮುಖವಾಗಿರುತ್ತದೆ. ಒಂದೇ ಕುಲದಲ್ಲಿ ಮದುವೆಯಾಗುವ ಪದ್ಧತಿ ನಿಷೇಧವಾಗಿರುತ್ತದೆ. ಬೇರೆ–ಬೇರೆ ಕುಲದಲ್ಲಿ ವಿವಾಹವಾದ ದಂಪತಿಗಳಿಗೆ ಜನಿಸಿದ ಮಕ್ಕಳು ತಂದೆಯ ಕುಲಕ್ಕೆ ಸೇರುತ್ತಾರೆ. ಈ ಸಮುದಾಯದಲ್ಲಿ ಕುಲವನ್ನು 'ಪಟ್ಟೋಲೆ', 'ತೆರನ' ಎಂದು ಕರೆಯುತ್ತಾರೆ. ವಿವಾಹ ಮತ್ತು ಸಾಮಾಜಿಕ ಐಕ್ಯತೆಯನ್ನು ಕಾಪಾಡುವಲ್ಲಿ ಕುಲಗಳು ಪ್ರಮುಖಪಾತ್ರ ವಹಿಸುತ್ತವೆ.

ಹರೀಶ್ ಪಿ.ಎನ್. (1993) ಅವರು ತಮ್ಮ ಅಧ್ಯಯನದಲ್ಲಿ ಪಣಿಯನ್ ಸಮುದಾಯದ 35 ಕುಲಗಳನ್ನು ಗುರುತಿಸಿದ್ದಾರೆ. ಬಿ.ಕೆ ದಾಸ್ (1984) ತಮ್ಮ ಅಧ್ಯಯನದಲ್ಲಿ 60 ಕ್ಕೂ ಹೆಚ್ಚು ಕುಲಗಳಿವೆ ಎಂದು ಹೇಳಿದ್ದಾರೆ. ಆದರೆ ಪ್ರಸ್ತುತ ಅಧ್ಯಯನಲ್ಲಿ ಪಾಕತ್ತೈ, ಪಾಪ್ಪಲಿಯೆ, ಕೋಯಿಮೂಟ್ಟೈ, ಕುಂಡನಿಯಂ, ಕಿರಿಮಮಮತ್ತೈ, ಅಚ್ಚೀರಿಯ, ಅಮ್ಮಂಗಾಳಿಯ, ಕೋತಳಿಯಂ, ಕೊಟ್ಟೆಪಟ್ಟಿ, ಪರಚೆರಿಯೆ ಕುಲಗಳು ಸೇರಿದಂತೆ 54 ಕುಲಗಳನ್ನು ಗುರುತಿಸಲಾಗಿದೆ.

**ಬಂಧುತ್ವ ವ್ಯವಸ್ಥೆ**

ಬಂಧುತ್ವ ವ್ಯಕ್ತಿ–ವ್ಯಕ್ತಿಗಳ ನಡುವೆ ಸಂಬಂಧಗಳನ್ನು ಬೆಸೆಯುವ ಸಾಮಾಜಿಕ ಮತ್ತು ಜೈವಿಕ ಕೊಂಡಿಯಾಗಿದೆ. ರಕ್ತ ಸಂಬಂಧ ಮತ್ತು ವೈವಾಹಿಕ ಸಂಬಂಧಗಳ ಮೂಲಕ ಬಂಧುತ್ವ ವ್ಯವಸ್ಥೆಯನ್ನು ಗುರುತಿಸಲಾಗುತ್ತದೆ. ಇದರಲ್ಲಿ ಸಂಬಂಧಿಕರು ಪರಸ್ಪರ ಬಂಧಿಗಳಾಗಿದ್ದಾರೆ. ಪಣಿಯನ್ ಸಮುದಾಯದಲ್ಲಿ ತಂದೆಯನ್ನು 'ಅಪ್ಪೆ', ತಾಯಿಯನ್ನು 'ಅಮ್ಮೆ', ಹಿರಿಯ ಸೋದರನನ್ನು 'ಅಯ್ಯ', ಕಿರಿಯ ಸೋದರನನ್ನು 'ಅಚ್ಚೆ', ಅಕ್ಕನನ್ನು 'ಅನಿಯೇ' ಎಂದು ಕರೆಯಲಾಗುತ್ತಿದೆ. ಬಂಧುತ್ವ ಕೂಡ ವಿವಾಹ ಸಂದರ್ಭದಲ್ಲಿ ಕುಲದಂತೆ ಪ್ರಮುಖ ಪಾತ್ರವಹಿಸುತ್ತದೆ. ಜೈವಿಕ ಸಂಬಂಧ ಮತ್ತು ವೈವಾಹಿಕ ಸಂಬಂಧಗಳ ಮೂಲಕ ಕುಟುಂಬದ ಸದಸ್ಯರಾಗುವ ಸಂಬಂಧಿಕರ ನಡುವೆ ವ್ಯತ್ಯಾಸವನ್ನು ಗುರುತಿಸಲು ಬಂಧುತ್ವ ಅನುವು ಮಾಡಿಕೊಡುತ್ತದೆ. ಸಾಮಾನ್ಯವಾಗಿ ಚಾಚೆ, ಚಾಚ್ಚಪ್ಪೆ, ಅಪ್ಪೆ, ಮಗೆ, ಪೆದಮಗೆ ಇದು ವಂಶಪರಂಪರೆ/ಪೀಳಿಗೆಯನ್ನು ಸೂಚಿಸುತ್ತದೆ. ಈ ಪದಗಳು ರಕ್ತಸಂಬಂಧದ ಶ್ರೇಣೀಕೃತ ಸ್ವರೂಪ ಮತ್ತು ತಲೆಮಾರುಗಳಾದ್ಯಂತ ಪಾತ್ರಗಳು ಮತ್ತು ಜವಾಬ್ದಾರಿಗಳ ಪ್ರಸರಣವನ್ನು ಪ್ರತಿಬಿಂಬಿಸುತ್ತವೆ.

**ವಾಸಸ್ಥಾನ**

ಪಣಿಯನ್ ಬುಡಕಟ್ಟು ಸಮುದಾಯದ ಜನರು ತಾವು ವಾಸಿಸುವ ಪ್ರದೇಶಗಳನ್ನು 'ಪಾಡಿ' (ಹಾಡಿ) ಎಂದು ಕರೆಯುತ್ತಾರೆ. ಸರ್ಕಾರವು ಮನೆ ನಿರ್ಮಿಸಿಕೊಟ್ಟಿರುವ ಪ್ರದೇಶಗಳಿಗೆ 'ಗಿರಿಜನ ಕಾಲೋನಿ'ಗಳು ಎಂದು ಕರೆಯುತ್ತಾರೆ. ಹಿಂದೆ ಅರಣ್ಯ ಅಥವಾ ಅರಣ್ಯದಂಚಿನ ಪ್ರದೇಶದಲ್ಲಿ 15–20 ಮನೆಗಳಿರುತ್ತಿದ್ದವು. ಆದರೆ ಅರಣ್ಯ ಕಾಯ್ದೆ ಮತ್ತು ಇತರೆ ಅಭಿವೃದ್ಧಿ ಯೋಜನೆಗಳಿಂದ ಕಾಡಿನಿಂದ ಹೊರತಂದು ಕಾಲೋನಿಗಳಲ್ಲಿ ಪುನರ್ವಸತಿಗೊಳಿಸಿದ್ದಾರೆ. ಬಹುತೇಕ ಪಣಿಯನ್‌ರು ತೋಟಗಳ ಲೈನ್‌ಮನೆಗಳಲ್ಲಿಯೇ ನೆಲೆಸಿದ್ದಾರೆ.

**ಮನೆಯ ಮಾದರಿ**

ಪಣಿಯನ್ ಬುಡಕಟ್ಟು ಸಮುದಾಯದ ಜನರು ತಾವು ವಾಸಿಸುವ ಮನೆಯನ್ನು **'ಪೀರೆ'** ಎಂದು ಕರೆಯುತ್ತಾರೆ. ಇವರು ಮನೆಕಟ್ಟುವಾಗ ಮೊದಲು ಎರಡರಿಂದ ಮೂರು ಅಡಿ ಎತ್ತರದ ಆಯತಾಕಾರದ



ಮಣ್ಣಿನ ಜಗುಲಿಯನ್ನು ಕಟ್ಟುತ್ತಾರೆ. ಮನೆಯ ಸುತ್ತಲೂ ಗೋಡೆಕಟ್ಟಲು ಜೇಡಿ ಮಣ್ಣಿನ ಸುಡದ ಇಟ್ಟಿಗೆಯನ್ನು ಬಳಸುತ್ತಾರೆ. ಅಥವಾ ಸುತ್ತಲೂ ಬಿದಿರು ಅಚ್ಚೆಗಳನ್ನು ಹಾಕಿ ಅದಕ್ಕೆ ಮಣ್ಣನ್ನು ಮೆತ್ತುತ್ತಾರೆ. 'ಪೀರೆ'ಗಳಿಗೆ ಕಿಟಕಿಗಳಿರುವುದಿಲ್ಲ. ಮನೆಯ ಮುಂಭಾಗದಲ್ಲಿ ಜಗಲಿಯನ್ನು ನಿರ್ಮಿಸಿರುತ್ತಾರೆ. ಮನೆಯ ಒಳಗೆ ಎರಡು ಅಡಿ ಎತ್ತರದ ಗೋಡೆ ನಿರ್ಮಿಸಿ ಅಡುಗೆ ಕೋಣೆ ಪ್ರತ್ಯೇಕಿಸುತ್ತಾರೆ. ದೇವರ ಪೂಜೆಗಾಗಿ ಅಡುಗೆ ಮನೆಯ ಒಳಗಡೆ ಚಿಕ್ಕ ಜಗುಲಿಯನ್ನು ನಿರ್ಮಿಸಿಕೊಂಡು ಅಲ್ಲಿ ದೇವರನ್ನು ಪೂಜಿಸುತ್ತಾರೆ. ಗೋಡೆ ಮತ್ತು ನೆಲವನ್ನು ಸುಟ್ಟ ಭತ್ತದ ಹುಲ್ಲಿನ ಬೂದಿ ಹಾಗೂ ಧನಗಳ ಸಗಣಿಯಿಂದ ಸಾರಿಸಿಸುತ್ತಾರೆ. ಮನೆಯ ಸುತ್ತಲಿನ ಖಾಲಿ ಜಾಗದಲ್ಲಿ ಬಾಳೆಗಿಡ, ಕುಂಬಳಕಾಯಿ, ಪಡವಲಕಾಯಿ, ಗೆಣಸು, ವಿವಿಧ ರೀತಿಯ ಹೂವಿನ ಗಿಡಗಳನ್ನು ಬೆಳೆಯುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರವೇ ಮನೆಯನ್ನು ನಿರ್ಮಿಸಿಕೊಡುತ್ತಿರುವುದ್ದರಿಂದ ಮನೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ. ಅಡಿಪಾಯವನ್ನು ಕಲ್ಲಿನಿಂದಲೂ ಗೋಡೆಯನ್ನು ಸಿಮೆಂಟ್ ಇಟ್ಟಿಗೆಯಿಂದಲೂ ನಿರ್ಮಿಸಿಕೊಳ್ಳುತ್ತಾರೆ. ಮನೆಗೆ ಕಬ್ಬಿಣದ ಬಾಗಿಲು ಮತ್ತು ಎರಡು ಅಥವ ಒಂದು ಸಿಮೆಂಟ್ ಕಿಟಕಿಯನ್ನೂ ಹಾಕಿರುತ್ತಾರೆ. ಮನೆಯೊಳಗೆ ಅಡುಗೆ ಮನೆಯನ್ನು ಪ್ರತ್ಯೇಕಿಸಲಾಗಿರುತ್ತದೆ. ಮೇಲ್ಛಾವಣಿಗೆ ಹೆಂಚು ಅಥವ ಕಲ್ನಾರು ಶೀಟನ್ನು ಬಳಸುತ್ತಾರೆ.

**ಉಡುಗೆ–ತೊಡಗೆ**

ಪಣಿಯನ್ ಸಮುದಾಯದ ಉಡುಗೆ–ತೊಡುಗೆ ಸ್ಥಳೀಯ ಕೂಲಿಕಾರ್ಮಿಕರು ಮತ್ತು ಬಡವರು ತೊಡುವ



ಉಡುಗೆಗಿಂತ ಭಿನ್ನವಾಗಿಲ್ಲ. ಗಂಡಸರು ಸಾಮಾನ್ಯವಾಗಿ ಲುಂಗಿ ಮತ್ತು ಶರ್ಟ್ ತೊಟ್ಟರೆ ಹೆಂಗಸರು ಸೀರೆಯನ್ನು ಉಡುತ್ತಾರೆ. ಆದರೆ ಸೀರೆಯನ್ನು ಉಡುವ ರೀತಿ ವಿಶಿಷ್ಟವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಗಂಡು ಮಕ್ಕಳು ಮತ್ತು ಯುವಕರು ಪ್ಯಾಂಟ್, ಟಿ ಶರ್ಟ್, ಶರ್ಟ್ ನಿಕ್ಕರ್ ಬಳಸುತ್ತಾರೆ. ಯುವತಿರು ಮತ್ತು ಹೆಣ್ಣು ಮಕ್ಕಳು ಚೂಡಿದಾರ, ಲಂಗ, ರವಿಕೆ, ಪ್ಯಾಂಟ್, ಟಿಶರ್ಟ್ ಇತರೆ ಆಧುನಿಕ ಉಡುಪುಗಳನ್ನು ಮೈಮುಚ್ಚುವಂತೆ ಧರಿಸುತ್ತಾರೆ. ಸಾಮಾನ್ಯವಾಗಿ ಇವರ ಉಡುಪುಗಳು ಸರಳವಾಗಿರುತ್ತವೆ. ಮದುವೆ, ಹಬ್ಬ ಮತ್ತು ಇತರೆ ಶುಭ ಸಂದರ್ಭಗಳಲ್ಲಿ ಹೊಸ ಬಟ್ಟೆ, ಇಸ್ತ್ರಿ ಮಾಡಿದ ಬಟ್ಟೆಯನ್ನು ತೊಡುತ್ತಾರೆ. ಗಂಡಸರು ಬಿಳಿ ಪಂಚೆ ಮತ್ತು ಬಿಳಿ ಶರ್ಟು ಬಳಸುತ್ತಾರೆ.

**ಆಭರಣ ಮತ್ತು ವೈಯಕ್ತಿಕ ಅಲಂಕಾರ**

ಪಣಿ ಸಮುದಾಯದ ಮಹಿಳೆಯರು ಓಲೆ, ಮೂಗುತಿ, ಗಾಜಿನ ಬಳೆ ತೊಡುತ್ತಾರೆ. ಹೆಣ್ಣು ಮಕ್ಕಳು ಕತ್ತಿಗೆ ಮಣಿ ಸರ, ಪ್ಲಾಸ್ಟಿಕ್ ಸರ, ತಲೆಗೆ ಬೈತಲೆ ಬಟ್ಟು, ಹಣೆಬಟ್ಟು, ಕೈಗೆ ಕಪ್ಪು ದಾರ, ದೇವರ ಚಿತ್ರವಿರುವ ಡಾಲರ್ ಮುಂತಾದವುಗಳನ್ನು ಧರಿಸುತ್ತಾರೆ. ಗಂಡು ಮಕ್ಕಳು ಕೂಡ ಕಿವಿಗೆ ಕೊಂಡಿ, ಕೈಗೆ ರಬ್ಬರ್ ಬಳೆ, ಕಡಿಮೆ ಬೆಲೆಯ ಉಂಗುರಗಳನ್ನು ಧರಿಸುತ್ತಾರೆ. ವೈಯಕ್ತಿಕ ಅಲಂಕಾರದ ಚಿಹ್ನೆಯಾಗಿ ಹಚ್ಚೆ ಹಾಕಿಸಿಕೊಳ್ಳುವುದು ರೂಢಿಯಲ್ಲಿದೆ. ಸಾಮಾನ್ಯವಾಗಿ ಹಣೆ, ಮುಂಗೈ, ತೋಳುಗಳಿಗೆ ವಿವಿಧ ರೂಪದಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಬಡತನದಿಂದಾಗಿ ಮಕ್ಕಳು ಬರಿಗಾಲಲ್ಲಿ ಸುತ್ತಾಡುವುದು ಅಲ್ಲಲ್ಲಿ ಕಂಡು ಬರುತ್ತದೆ.

**ಆಹಾರ ಮತ್ತು ಪಾನೀಯಗಳು**

ಪಣಿಯನ್ ಸಮುದಾಯದವರು ಮಾಂಸಾಹಾರಿಗಳು. ಮಾಂಸವನ್ನು ವಾರಕ್ಕೊಮ್ಮೆ ಅಥವಾ ಹದಿನೈದು ದಿನಕ್ಕೊಮ್ಮೆ ಸೇವಿಸುತ್ತಾರೆ. ಹಂದಿ ಮಾಂಸ ಪ್ರಿಯರಾದ ಇವರು ಮೀನು, ಕೋಳಿ, ಕುರಿ ಮತ್ತು ಆಡಿನ ಮಾಂಸವನ್ನು ಸೇವಿಸುತ್ತಾರೆ. ಆದರೆ ಗೋಮಾಂಸವನ್ನು ಸೇವಿಸುವುದಿಲ್ಲ. ಅನ್ನ ಇವರ ಮುಖ್ಯ ಆಹಾರವಾಗಿದೆ. ಅಕ್ಕಿಯಿಂದ ಅನ್ನ, ಗಂಜಿಯನ್ನು ಮಾಡುತ್ತಾರೆ. ಬೆಳಿಗಿನ ಉಪಹಾರಕ್ಕೆ ಗಂಜಿ ಅಥವ ಬಿಳಿ ಅನ್ನ ಅಥವಾ ಚಿತ್ರಾನ್ನ, ರೈಸ್‌ಬಾತ್ ಸೇವಿಸುತ್ತಾರೆ. ಅನ್ನದ ಗಂಜಿಯಯ ಜೊತೆಗೆ ಉಪ್ಪು ಮೀನು, ಅಥವಾ ಉಪ್ಪಿನಕಾಯಿಯನ್ನು ಬೆರೆಸಿ ತಿನ್ನುತ್ತಾರೆ. ಹಲಸಿನ ಕಾಯಿಪಲ್ಯ ಇವರಿಗೆ ಪ್ರಿಯವಾದುದು. ಇವರು ಸ್ಥಳೀಯ ಪ್ರದೇಶಗಳಲ್ಲಿ ಸಿಗುವ ಗಣಕೆ, ಒಂದೆಲಗ, ಹೊನಗೊನೆ, ಸೀಗೆ ಮುಂತಾದ ಸೊಪ್ಪು ಮತ್ತು ತರಕಾರಿಗಳನ್ನು ಸಾಂಬಾರು ಮಾಡಲು ಬಳಸುತ್ತಾರೆ ಸರ್ಕಾರ ಪೌಷ್ಟಿಕ ಆಹಾರ ಯೋಜನೆಯಡಿ ಅಕ್ಕಿ, ಕಡಲೆಕಾಳು, ಹಸಿರುಕಾಳು, ಹುರುಳಿಕಾಳು, ಹಲಸಂದೆ ಕಾಳು, ಬೆಲ್ಲ, ತುಪ್ಪ, ಅಡುಗೆ ಎಣ್ಣೆ ಮತ್ತು ಮೊಟ್ಟೆಯನ್ನು ನೀಡುತ್ತಾರೆ. ಆದರೆ ದಾಖಲಾತಿಗಳ ಕೊರತೆಯಿಂದ ಕೆಲವರಿಗೆ ಸಿಗುತ್ತಿಲ್ಲ ಎಂದು ಸಮುದಾಯದ ಹಿರಿಯರು ಹೇಳುತ್ತಾರೆ. ಅಡುಗೆ ಮಾಡಲು ಇಂದಿಗೂ ಕೂಡ ಅತ್ಯಂತ ಹೆಚ್ಚು ಕುಟುಂಬಗಳು ಸೌದೆ ಒಲೆಯನ್ನು ಬಳಸುತ್ತಾರೆ. ಅಲ್ಪ ಪ್ರಮಾಣದಲ್ಲಿ ಮಾತ್ರ ಗ್ಯಾಸ್ ಬಳಸುತ್ತಾರೆ. ಇವರಲ್ಲಿಯೂ ಕೂಡ ಪಂಜಿರಿ ರಂತೆ ಗರ್ಭಿಣಿ ಮತ್ತು ಬಾಣಂತಿಯರಿಗೆ ಪಥ್ಯ ಆಹಾರವಿರುತ್ತದೆ. ಹಬ್ಬ ಹಾಗೂ ವಿಶೇಷ ಸಂದರ್ಭಗಳಲ್ಲಿ ವಿಶೇಷ ಅಡುಗೆ ಮಾಡಲಾಗುತ್ತದೆ. ಕಾಫಿ, ಕಟ್ಟಾ ಚಹಾ ಕುಡಿಯುವ ಅಭ್ಯಾಸ ಸಾಮಾನ್ಯವಾಗಿದೆ. ಕೂಲಿ ಕಾರ್ಮಿಕರಾದ ಪಣಿಯರಲ್ಲಿ ಮದ್ಯಪಾನ ಮತ್ತು ಧೂಮಪಾನ ಸಾಮಾನ್ಯವಾಗಿದೆ.

**ಭಾಷೆ ಮತ್ತು ಸಂವಹನ**

ಪಣಿಯನ್ ಸಮುದಾಯದವರು ತಮ್ಮದೇ ಭಾಷೆಯನ್ನು ಮಾತನಾಡುತ್ತಾರೆ. ಇವರು ಮಾತನಾಡುವ ಭಾಷೆಯನ್ನು ಪಣಿಯನ್ ಭಾಷೆ ಎಂದು ಕರೆಯುತ್ತಾರೆ. ಮನೆಯಲ್ಲಿ ತಮ್ಮ ಮಾತೃಭಾಷೆಯಲ್ಲಿಯೇ ಮಾತನಾಡುತ್ತಾರೆ. ಹೊರಗಿನ ವ್ಯಕ್ತಿಗಳೊಂದಿಗೆ ಕನ್ನಡ ಅಥವ ಕೊಡವ ಅಥವ ಮಲೆಯಾಳಂ ಭಾಷೆಯಲ್ಲಿ ಮಾತನಾಡುತ್ತಾರೆ. ಪಣಿ ರು ತಮ್ಮ ಮಾತೃಭಾಷೆಯೊಂದಿಗೆ ಕನ್ನಡ, ಮಲೆಯಾಳಂ, ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಆದರೆ ಓದು ಬರೆಯಲು ಕನ್ನಡವನ್ನು ಬಳಸುತ್ತಾರೆ.

**ಶಿಕ್ಷಣ ಮತ್ತು ಸಾಕ್ಷರತೆ**

ಪಣಿಯನ್ ಸಮುದಾಯದವರು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಅನಕ್ಷರತೆಗೆ ಲಿಂಗಬೇಧವಿಲ್ಲ. ಮಧ್ಯಂತರದಲ್ಲಿ ಶಾಲೆ ಬಿಡುವವರ ಪ್ರಮಾಣ ಅಧಿಕವಾಗಿದೆ. ಇವರ ಶೈಕ್ಷಣಿಕಾಭಿವೃದ್ಧಿಗೆ ಸರ್ಕಾರ ವಿವಿಧ ಸವಲತ್ತುಗಳನ್ನು ಕಲ್ಪಿಸುತ್ತಿದ್ದರೂ ಕೂಡ ಆರ್ಥಿಕ ಪರಿಸ್ಥಿತಿ, ಶಿಕ್ಷಣ ಸಂಸ್ಥೆಗಳ ಅಲಭ್ಯತೆ, ಸಾರಿಗೆ ಕೊರತೆ, ಪೋಷಕರು ಮತ್ತು ಮಕ್ಕಳ ನಿರಾಸಕ್ತಿಯಿಂದಾಗಿ ಶಾಲೆಯನ್ನು ಅರ್ಧಕ್ಕೆ ಮೊಟಕುಗೊಳಿಸುತ್ತಿದ್ದಾರೆ.

**ಆರ್ಥಿಕ ಜೀವನ**

ಪಣಿಯನ್‌ರಲ್ಲಿ ಶೇ.70ಕ್ಕಿಂತ ಹೆಚ್ಚು ಕುಟುಂಬಗಳು ಭೂ ರಹಿತರಾಗಿದ್ದು, ಜೀವನ ನಿರ್ವಹಣೆಗೆ ಕೂಲಿಯನ್ನೇ ಅವಲಂಬಿಸಿದ್ದಾರೆ. ಪಣಿಯನ್‌ರ ಜೀವನಕ್ಕೆ ಯಾವುದೇ ಆಧಾರವಿಲ್ಲದ ಕಾರಣ ಕಾಫಿ ಮತ್ತು ಟೀ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಬಹುತೇಕ ಕಾರ್ಮಿಕರು ವಸತಿ ರಹಿತರಾಗಿದ್ದು, ಒಂದೇ ತೋಟದಲ್ಲಿ ಬಹುಕಾಲದಿಂದ ದುಡಿಯುತ್ತಿದ್ದಾರೆ. ಮೂಲತಃ ಜೀತ ಕಾರ್ಮಿಕರಾದ ಇವರನ್ನು ಹಿಂದೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಬ್ರಿಟಿಷರು ಭಾರತಕ್ಕೆ ಬಂದ ನಂತರ ಅನಿಷ್ಟ ಪದ್ಧತಿ ಕೊನೆಗೊಂಡಿತು. ಪ್ರಸ್ತುತ ಜೀತಪದ್ಧತಿ ನಿಷೇಧಗೊಂಡಿರುವುದ್ದರಿಂದ ತೋಟಗಳಲ್ಲಿ ಜೀತ ಕಾರ್ಮಿಕರಂತೆಯೇ ದುಡಿಯುತ್ತಿದ್ದಾರೆ. ಅಗತ್ಯವಿದ್ದಾಗ ತೋಟದ ಮಾಲೀಕರು ಹಣದ ನೆರವು ನೀಡುತ್ತಾರೆ ಹಾಗೂ ವಯಸ್ಸಿಗೆ ಬಂದ ಮಕ್ಕಳಿಗೆ ಮದುವೆ ಕೂಡ ಮಾಡಿ ತಮ್ಮಲ್ಲಿಯೇ ಕಾರ್ಮಿಕರಾಗಿಯೇ ನೇಮಿಸಿಕೊಳ್ಳುತ್ತಾರೆ ಪಣಿ ರಲ್ಲಿ ಆಧಾರ್ ಕಾರ್ಡ್, ರೇಷನ್‌ಕಾರ್ಡ್, ಜಾತಿ ಪ್ರಮಾಣ ಪತ್ರ ಹಾಗೂ ಇತರೆ ದಾಖಲಾತಿಗಳ ಕೊರತೆ ಹೆಚ್ಚಿದ್ದು, ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ ಎಂಬುದಾಗಿ ಸ್ಥಳೀಯರು ಹೇಳುತ್ತಾರೆ.

ಒಂದು ದಿನಕ್ಕೆ ಪುರುಷರಿಗೆ 400 ರಿಂದ 500 ರೂಪಾಯಿ ಕೂಲಿಯನ್ನು ಹಾಗೂ ಮಹಿಳೆಯರಿಗೆ 300 ರಿಂದ 350 ರೂಪಾಯಿಗಳನ್ನು ಕೂಲಿ ರೂಪದಲ್ಲಿ ನೀಡುತ್ತಿದ್ದಾರೆ. ಕೆಲಸ ಇಲ್ಲದಿರುವ ಸಂಧರ್ಭಗಳಲ್ಲಿ ಇವರು ಮೀನು ಹಿಡುಯುವುದು, ಜೇನು ಹಳಿಯುವುದು, ಗೆಡ್ಡೆ–ಗೆಣಸು ಸೊಪ್ಪು–ಸೌದೆ ಹಾಗೂ ಮರದ ಪಾಚಿ, ಕಲ್ಲು ಹೂ, ಮೇಣ, ಅಂಟುವಾಳ, ನೆಲ್ಲಿಕಾಯಿ, ಹುಣಸೇಹಣ್ಣು ಮತ್ತಿತರ ಉತ್ಪನ್ನಗಳನ್ನು ಸಂಗ್ರಹಿಸಿ ಲ್ಯಾಂಪ್ಸ್ ಸೊಸೈಟಿಗೆ ಮಾರುತ್ತಾರೆ. ಇದರಿಂದ ಬಂದ ಹಣವನ್ನು ತಮ್ಮ ದಿನನಿತ್ಯದ ಖರ್ಚುಗಳಿಗೆ ವಿನಿಯೊಗಿಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಯುವಕರು ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಹೋಟೆಲ್, ದಿನಸಿ ಅಂಗಡಿಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಪಣಿಯನ್‌ರಲ್ಲಿ ಜಮೀನು ಹೊಂದಿರುವವರ ಪ್ರಮಾಣ ತುಂಬಾ ಕಡಿಮೆಯಿದೆ. ಜಮೀನು ಹೊಂದಿರುವ ಕುಟುಂಬಗಳಲ್ಲಿ ಭತ್ತ, ಕಾಫಿ, ಏಲಕ್ಕಿ, ತರಕಾರಿ, ಹಣ್ಣುಗಳನ್ನು ಬೆಳೆಯುತ್ತಾರೆ. ಕೆಲವರು ಮಾತ್ರ ಕೋಳಿಗಳನ್ನು ಸಾಕಿದ್ದಾರೆ. ಬೆರಳೆಣಿಕೆ ಮಂದಿ ಮಾತ್ರ ಆಶ್ರಮ ಶಾಲೆಗಳಲ್ಲಿ ಹಾಗೂ ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದಾರೆ.

**ಜೀವನಾವರ್ತನ ಆಚರಣೆಗಳು**

***ಜನನ ಮತ್ತು ನಾಮಕರಣ***

ಪಣಿಯನ್ ಬುಡಕಟ್ಟು ಸಮುದಾಯದಲ್ಲಿ ಜನನ ಮತ್ತು ನಾಮಕರಣ ಪದ್ಧತಿ ವಿಶಿಷ್ಟವಾಗಿದೆ. ಪಣಿಯನ್‌ರಲ್ಲಿ ಗಂಡನ ಮನೆಯಲ್ಲಿಯೇ ಹೆರಿಗೆಯಾಗುತ್ತದೆ. ಹೆರಿಗೆಯ ದಿನಗಳು ಹತ್ತಿರ ಬಂದಾಗ ಸೂಲಗಿತ್ತಿ ಜೊತೆಗಿದ್ದು ಜೋಪಾನವಾಗಿ ಹೆರಿಗೆ ಮಾಡುತ್ತಾರೆ. ಸೂಲಗಿತ್ತಿಯನ್ನು ಇವರು 'ಈಸ್ಥಾತಿ' ಎಂದು ಕರೆಯುತ್ತಾರೆ. ಮಗು ಜನಿಸಿದ 12 ದಿನಗಳವರೆಗೆ ಸೂತಕವಿರುತ್ತದೆ. ಸೂತಕ ಕಳೆಯುವವರೆಗೂ ಈಸ್ಥಾತಿ ಬಾಣಂತಿಯ ಜೊತೆಗಿರುತ್ತಾರೆ. 12 ದಿನವೇ ಮಗುವಿಗೆ ನಾಮಕರಣ ಮಾಡುತ್ತಾರೆ. ಅಂದು ಎರಡು ಹೊಸ ಮೊರಗಳನ್ನು ತಂದು ಒಂದು ಮೊರದಲ್ಲಿ ಮಗುವನ್ನು ಹಾಕಿ ಈಸ್ಥಾತಿ ಕೊಟ್ಟರೆ, ಮತ್ತೊಂದು ಮೊರದಲ್ಲಿ ಈಸ್ಥಾತಿಗೆ ಬಾಣಂತಿ ಮನೆಯವರು ಎಲೆ ಅಡಿಕೆ ಅಕ್ಕಿ ಬೆಲ್ಲ ಹೊಸ ಬಟ್ಟೆ ಕೈಲಾದಷ್ಟು ಹಣವನ್ನು ಕೊಡುತ್ತಾರೆ. ಅಲ್ಲಿಗೆ ಸೂಲಗಿತ್ತಿಯ ಜವಾಬ್ದಾರಿ ಮುಗಿಯುತ್ತದೆ. ಆ ನಂತರ ಗಂಡನ ಮನೆಯವರೇ ಮಗು ಮತ್ತು ಬಾಣಂತಿಯನ್ನು ನೋಡಿಕೊಳ್ಳುತ್ತಾರೆ.

***ಋತುಮತಿ ಶಾಸ್ತ್ರ***

ಪಣಿಯನ್ ಸಮುದಾಯದಲ್ಲಿ ಹೆಣ್ಣು ಋತುಮತಿಯಾದರೆ ಸಂಭ್ರಮಿಸುತ್ತಾರೆ. ಋತುಮತಿಯಾದ ಹೆಣ್ಣು ಮಗಳಿಗೆ ಮೊದಲು ಸ್ನಾನ ಮಾಡಿಸಿ ನಂತರ ತಮ್ಮ ಬಂಧುಗಳಿಗೆ ತಿಳಿಸುತ್ತಾರೆ. ಋತುಮತಿಯಾದ 12ನೇ ದಿವಸ ಹುಡುಗಿಗೆ ಶಾಸ್ತ್ರ ಮಾಡುತ್ತಾರೆ. ಅಂದು ಹೊಸಮಡಿಕೆಯಲ್ಲಿ ಹೊಸನೀರು (ಗಂಗಾ ಪೂಜೆ) ತಂದ ನಂತರ ಹುಡುಗಿಯನ್ನು ಸಿಂಗರಿಸಿ ಮನೆಯ ಮುಂದೆ ಕೂರಿಸುತ್ತಾರೆ. ಆ ಸಂದರ್ಭದಲ್ಲಿ ಹುಡುಗಿಗೆ ಉಡುಗೊರೆ, ಹಣ ಅಥವ ಧಾನ್ಯಗಳನ್ನು ಕೊಡುತ್ತಾರೆ. ನಂತರ ಎಲ್ಲರೂ ಊಟ ಮಾಡಿಕೊಂಡು ಆ ರಾತ್ರಿ ದುಡಿ ಮತ್ತು ಕೊಂಬು ನುಡಿಸುತ್ತಾ ಕುಣಿಯುತ್ತಾರೆ. ಈ ಆಚರಣೆಯಲ್ಲಿ ಭಾಗಿಯಾದ ಹಿರಿಯರಿಗೆ ಋತುಮತಿಯಾದ ಹೆಣ್ಣು ಮಗಳು ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುತ್ತಾಳೆ. ಋತುಮತಿಯಾದ ಹೆಣ್ಣಿಗೆ ಪೌಷ್ಟಿಕಯುಕ್ತ ಆಹಾರ ನೀಡಿ ಆರೈಕೆ ಮಾಡುತ್ತಾರೆ. ಕೊಬ್ಬರಿ, ಬೆಲ್ಲ, ಖರ್ಜೂರ, ಒಣ ದ್ರಾಕ್ಷಿ, ಗೊಡಂಬಿ, ಕಲ್ಲು ಸಕ್ಕರೆ, ಕುಸಲಕ್ಕಿ ಅನ್ನ, ಬೇಳೆ ಸಾಂಬಾರ್ ಮುಂತಾದವುಗಳನ್ನು ನೀಡುತ್ತಾರೆ. ಆದರೆ ಶೀತಕಾರಕ ಆಹಾರ ಪದಾರ್ಥಗಳನ್ನು ಕೊಡುವುದಿಲ್ಲ.

***ವಿವಾಹ ಪದ್ಧತಿ***

ಪಣಿಯನ್ ಸಮುದಾಯದಲ್ಲಿ ವಯಸ್ಸಿಗೆ ಬಂದ ಮಕ್ಕಳಿಗೆ ವಿವಾಹ ಮಾಡುತ್ತಾರೆ. ಇವರಲ್ಲಿ ಏಕಪತ್ನಿತ್ವ ಪದ್ಧತಿ ರೂಢಿಯಲ್ಲಿದೆ. ವಿಧವೆ ಅಥವ ವಿದರುರಿಗೆ ಮರು ಮದುವೆಯಾಗಲು ಅವಕಾಶವಿದೆ. ವಿವಾಹದಲ್ಲಿ ಕುಲದ ಪಾತ್ರ ಪ್ರಮುಖ. ಇವರು ಒಂದೇ ಕುಲದಲ್ಲಿ ವಿವಾಹ ಮಾಡುವುದಿಲ್ಲ. ತಂದೆಯ ಸೋದರಿಯ ಮಕ್ಕಳು ಅಥವಾ ತಾಯಿಯ ಸೋದರನ ಮಕ್ಕಳ ನಡುವೆ ವಿವಾಹವಾಗುವುದು ಕಂಡು ಬರುತ್ತದೆ. ಇವರ ವಿವಾಹ ಸರಳವಾಗಿ ಹಾಡಿ ಅಥವಾ ದೇವಸ್ಥಾನದಲ್ಲಿ ಹಿರಿಯರ ಸಮ್ಮುಖದಲ್ಲಿ ನೆರವೇರುತ್ತದೆ.

***ಶವಸಂಸ್ಕಾರ***

ಪಣಿಯನ್ ಬುಡಕಟ್ಟು ಸಮುದಾಯದಲ್ಲಿ ಮೃತರಾದಾಗ ಮೊದಲು ಕುಲದ ಮುಖ್ಯಸ್ಥರಾದ ಚೆಮ್ಮಕಾರನಿಗೆ ತಿಳಿಸಲಾಗುತ್ತದೆ. ಸಾವಿನಿಂದ ವರ್ಷದ ತಿಥಿಕಾರ್ಯದವರೆಗೂ ಚೆಮ್ಮಿಯ (ಚೆಮ್ಮಕಾರ) ಪಾತ್ರ

ಪ್ರಮುಖವಾದುದು. ಸಾವು ಸಂಭವಿಸಿದಾಗ ಹೆಣವನ್ನು ಮನೆಯಿಂದ ಹೊರತಂದು ಪೂರ್ವಕ್ಕೆ ತಲೆಯನ್ನಿಟ್ಟು ಮಲಗಿಸುತ್ತಾರೆ. ಚೆಮ್ಮಿ ಎಲೆಯಲ್ಲಿ ದೀಪ ಮಾಡಿ ಹೆಣದ ತಲೆಯ ಬಳಿ ಹಚ್ಚುತ್ತಾರೆ ಹಾಗೂ ಸೂತಕದ ಸಂಕೇತವಾಗಿ ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ನಂತರ ಎಲ್ಲರಿಗೂ ವಿಷಯ ತಲುಪಿಸುತ್ತಾರೆ. ಬಂಧುಗಳೆಲ್ಲ ಬಂದ ನಂತರ ಹೆಣಕ್ಕೆ ಸ್ನಾನ ಮಾಡಿಸಿ ಎಲ್ಲರೂ ಪೂಜೆ ಮಾಡುತ್ತಾರೆ. ಪೂಜೆ ಮಾಡುವಾಗ ಗಂಡ ಸತ್ತರೆ ಹೆಂಡತಿಯ ಪಕ್ಕದಲ್ಲಿಯೂ, ಹೆಂಡತಿ ಸತ್ತರೆ ಗಂಡನ ಪಕ್ಕದಲ್ಲಿಯೂ ಕೂರಿಸಿ ಪೂಜೆ ಮಾಡಲಾಗುತ್ತದೆ. ಪೂಜೆಯ ನಂತರ ಬಿದಿರು ಚಟ್ಟದ ಮೇಲೆ ಮಲಗಿಸಿ ಸಮಾಧಿಗೆ ಹೋಗುತ್ತಾರೆ, ಹೀಗೆ ಹೋಗುವಾಗ ಚೆಮ್ಮಿ ಮುಂದೆ ಹೋದರೆ ಉಳಿದವರು ಚಟ್ಟದ ಹಿಂದೆ ಬರುತ್ತಾರೆ. ಇವರಲ್ಲಿ ಹೂಳುವ ಪದ್ಧತಿ ರೂಢಿಯಲ್ಲಿದೆ. ಪಣಿಯನ್‌ರ ಮೂಲಸ್ಥಳವಾದ ಇಪ್ಪಿಮಲೆಯು ಪಶ್ಚಿಮ ದಿಕ್ಕಿಗಿರುವುದ್ದರಿಂದ ಮೂಲಸ್ಥಾನಕ್ಕೆ ಅಭಿಮುಖವಾಗಿ ತಲೆಯನ್ನಿಟ್ಟು ಹೂಳುತ್ತಾರೆ. ಚೆಮ್ಮಿಯು ಹೆಣವನ್ನು ಬಲ ಮಗ್ಗುಲಾಗಿ ಮಲಗಿಸಿ, ಕೈಗಳನ್ನು ಕಿವಿ ಹತ್ತಿರ ಮಡಚಿ ಪೂರ್ವ ದಿಕ್ಕಿಗೆ ತಲೆಯಿಟ್ಟು, ದಕ್ಷಿಣಕ್ಕೆ ಮುಖ ಮಾಡಿ ಹೂಳುತ್ತಾರೆ. ಸತ್ತ ಏಳನೆಯ ದಿವಸ ತಿಥಿಕಾರ್ಯ ಮಾಡುತ್ತಾರೆ. ಪುನಃ ಒಂದು ವರ್ಷಕ್ಕೆ ವರ್ಷಧ ತಿಥಿ ಮಾಡುತ್ತಾರೆ.

**ಧಾರ್ಮಿಕ ಆಚರಣೆಗಳು**

ಪಣಿಯನ್‌ರಲ್ಲಿ ಧಾರ್ಮಿಕ ಆಚರಣೆಗಳು ವಿಶಿಷ್ಟತೆಯಿಂದ ಕೂಡಿದೆ. ಪಣಿಯನ್‌ರು ತಮ್ಮದೇಯಾದ ವಿಶಿಷ್ಟ ದಾರ್ಮಿಕ ಆಚರಣೆಗಳ ನಡುವೆಯೇ ಹಿಂದೂ ಧರ್ಮವನ್ನು ಅನುಸರಿಸುತ್ತಿದ್ದಾರೆ. ಇವರು 'ಇಪ್ಪಿಮಲೆ' ಬೆಟ್ಟವನ್ನು ತಮ್ಮ ಮೂಲಸ್ಥಳವೆಂದು ಭಾವಿಸುತ್ತಾರೆ. ತಮ್ಮ ಮೂಲ ಪುರುಷರಾದ 'ಅಂಜಿಲಾತು ಅಪ್ಪೆಮುತ್ತಿ' ಮತ್ತು 'ಪಾಪಲಾತ್ತು ಅಮ್ಮೆಮುತ್ತಿ' ಇದೇ ಬೆಟ್ಟದಲ್ಲಿ ನೆಲೆಸಿದ್ದರು ಎಂಬುದಾಗಿ ನಂಬುತ್ತಾರೆ. ತಂಬೀರ, ಪಾಪ್ಪಲತ್ತು ಅಮ್ಮೆಮುತ್ತಿ, ನಿರ್‌ಮಲ್ಯೆ ಮುತ್ತಾಚಿ, ಅಂಜಿಲಾತು ಅಪ್ಪೆಮುತ್ತಿಯನ್ನು ಪೂಜಿಸುತ್ತಾರೆ. ಇವರುಗಳ ಬಗ್ಗೆ ಅಪಾರವಾದ ಭಕ್ತಿಯುಳ್ಳ ಇವರು ತಾವು ನೆಲೆಸಿರುವ ಹಾಡಿಗಳಲ್ಲಿ ಜಾತ್ರೆ ಮತ್ತು ಹಬ್ಬಗಳನ್ನು ಮಾಡುತ್ತಾರೆ. ಅಲ್ಲದೆ ಪೂರ್ವಿಕರು ತಮ್ಮ ಜೀವನವನ್ನು ನಿಯಂತ್ರಿಸುತ್ತಾರೆ ಮತ್ತು ಅವರಿಗೆ ಅಸಮಾಧಾನವನ್ನುಂಟು ಮಾಡುವ ಯಾವುದೇ ಕಾರ್ಯ ಮಾಡಬಾರದು ಎಂದು ಅವರು ನಂಬುತ್ತಾರೆ. ಪೂರ್ವಿಕರು ಕಾಡು ಪ್ರಾಣಿಗಳು ಅಥವಾ ಪ್ರಕೃತಿಯ ವಿಪತ್ತುಗಳಿಂದ ತಮ್ಮನ್ನು ಕಾಪಾಡುತ್ತಾರೆ ಎಂಬ ನಂಬಿಕೆ ಇಂದಿಗೂ ಇದೆ. ಇವರು ಕೊಡವರು ಆಚರಿಸುವ ಹಬ್ಬಗಳನ್ನೂ ಆಚರಿಸುತ್ತಾರೆ. ಇವರು ಹಾವು, ಆತ್ಮ, ಗಿಡ–ಮರ, ಪ್ರಾಣಿ–ಪಕ್ಷಿಗಳನ್ನು ಪೂಜಿಸುತ್ತಾರೆ.

ಪಣಿಯನ್‌ರು ಕುಳ್ಳಿ/ಮಾರಿಕೋಳು ಎಂಬ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಕುಳ್ಳಿ ಹಬ್ಬವೆಂದರೆ ದೇವರ ಆಟ ಎಂದರ್ಥ. ದೇವರುಗಳು ಜನರ ಮೈಮೇಲೆ ಬಂದು ಕುಣಿಯುವುದೇ ಈ ಹಬ್ಬದ ವಿಶೇಷತೆ. ಯಾವುದೇ ದೇವರಾಗಲಿ ನಮ್ಮ ದುಡಿಯ ಸದ್ದಿಗೆ ಕುಣಿಯಲೇಬೇಕು ಎಂದು ಹೇಳುತ್ತಾರೆ. ಈ ಹಬ್ಬವನ್ನು ಏಳು ದಿವಸಗಳು ಆಚರಿಸುತ್ತಾರೆ. ವರ್ಷಕ್ಕೆ ಒಂದು ಸಾರಿ ಈ ಹಬ್ಬವನ್ನು ಕುಟುಂಬದವರೆಲ್ಲ ಸೇರಿ ಆಚರಿಸುತ್ತಾರೆ. ದೇವರಿಗೆ ಊಟವನ್ನು ಕೊಡುವುದಕ್ಕಾಗಿ ಈ ಹಬ್ಬವನ್ನು ಆಚರಿಸುತ್ತೇವೆ ಎಂಬುದು ಅವರ ನಂಬಿಕೆಯಾಗಿದೆ.

**ತೈಯಾಕೋಳು**

ಪಣಿಯನ್‌ರು ತೈಯಾಕೋಳು ಎಂಬ ಮತ್ತೊಂದು ಹಬ್ಬವನ್ನು ಪ್ರಮುಖವಾಗಿ ಆಚರಿಸುತ್ತಾರೆ. ಯಾವುದೇ ಕುಟುಂಬದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿದ್ದರೆ ಅವರನ್ನು ದಷ್ಟಪುಷ್ಟನಾಗಿ ಮಾಡುವುದು ಈ ಹಬ್ಬದ ಆಚರಣೆಯಾಗಿದೆ. ಈ ಹಬ್ಬದಲ್ಲಿ ಕುಟುಂಬದ ಎಲ್ಲರೂ ಸ್ನಾನ ಮಾಡಿ ಮನೆಯಂಗಳದಲ್ಲಿ ಬಾಳೆಗಿಡದ ಪಟ್ಟಿಯಿಂದ ಮಂಟಪವನ್ನು ಕಟ್ಟಿ ಅದರ ಸುತ್ತಲೂ ತೆಂಗಿನ ಕಾಯಿ, ಎಲೆ, ಅಡಿಕೆ, ಅಕ್ಕಿ ಇಟ್ಟು ಪೂಜಿಸುತ್ತಾರೆ. ಅವರಲ್ಲೊಬ್ಬ ಬ್ರಾಹ್ಮಣ ಪೂಜಾರಿಯಂತೆ ವೇಷ ಹಾಕುತ್ತಾನೆ ಹಾಗೂ ಅವನು ಹೊಟ್ಟೆನೋವು ಬಂದಂತೆ ನಟಿಸಿ ಓಡುತ್ತಾನೆ. ಆಗ ಅಲ್ಲಿಗೆ ಚೆಮ್ಮಿಕಾರ ಬಂದು ಪೂಜೆ ನೆರವೇರಿಸುತ್ತಾನೆ. ಪೂಜೆ ಮುಗಿಯುವವರೆಗೂ ಬ್ರಾಹ್ಮಣ ವೇಷದಾರಿ ಆಗಾಗ್ಗೆ ಬಂದು ಹೋಗುವುದು ಮಾಡುತ್ತಾನೆ.

ಕೊಡಗು ಜಿಲ್ಲೆಯಲ್ಲಿರುವ ಪಣಿಯನ್ ಸಮುದಾಯದವರು ಗೌರಿ, ಗಣೇಶ, ಯುಗಾದಿ, ದೀಪಾವಳಿ ಮುಂತಾದ ಹಬ್ಬಗಳ ಜೊತೆಗೆ ಅಯ್ಯಪ್ಪ ಸ್ವಾಮಿಯನ್ನು ಪೂಜೆಸುತ್ತಾರೆ.

**ವಿರಾಮ, ವಿನೋದ ಮತ್ತು ಮನೋರಂಜನೆ**

ಮೂಲತಃ ಕೃಷಿ ಕೂಲಿ ಕಾರ್ಮಿಕರಾದ ಪಣಿಯನ್‌ರು ಬೆಳಗಿನಿಂದ ಸಂಜೆಯವರೆಗೂ ಶ್ರಮವಹಿಸಿ ದುಡಿದು ದಣಿದಿರುತ್ತಾರೆ. ಮನೆಗೆ ಬಂದಾಗ ಸುಮ್ಮನೆ ಕೂರುವುದಿಲ್ಲ ಬದಲಿಗೆ ಮನೆಯ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ಸಂಜೆ ದಣಿದು ಬರುವ ಇವರು ಬರುವಾಗಲೇ ಮದ್ಯಪಾನ ಮಾಡಿ ವಿರಮಿಸುತ್ತಾರೆ. ವಿರಾಮದ ವೇಳೆಯಲ್ಲಿ ಪುರುಷನು ಮನೆಯ ಕೆಲಸ ಮತ್ತು ಮಕ್ಕಳ ಪೋಷಣೆಯಲ್ಲಿ ಹೆಂಡತಿಗೆ ಸಹಾಯ ಮಾಡುತ್ತಾನೆ. ಈ ಹಿಂದೆ ವಿರಾಮದ ಸಮಯದಲ್ಲಿ ದುಡಿ ಮತ್ತು ಚೀನಿಯನ್ನು ನುಡಿಸುತ್ತ ದಿನನಿತ್ಯ ಹಾಡುವುದು ಮತ್ತು ಕುಣಿಯುವುದು ಮಾಡುತ್ತಿದ್ದರು. ಪ್ರಸ್ತುತ ರಾತ್ರಿ ಊಟವನ್ನು ಮುಗಿಸಿ ಮಲಗುವ ಮುನ್ನ ವಿರಾಮ ಪಡೆದುಕೊಳ್ಳುತ್ತಾರೆ. ಕೆಲವರು ಒಂದೆಡೆ ಸೇರಿ ಹರಟೆ ಹೊಡೆಯುತ್ತಾರೆ. ಯುವಕರು ಮೊಬೈಲ್ ನೋಡುವುದರಲ್ಲಿ ನಿರತರಾಗಿ ಸಮಯ ಕಳೆಯುತ್ತಾರೆ.

ವಿನೋದದ ಸಂದರ್ಭದಲ್ಲಿ ವ್ಯಕ್ತಿಯ ಕುರಿತು ವ್ಯಂಗ್ಯ, ಮೋಜು, ತಮಾಷೆ, ಸಲುಗೆ ಎಲ್ಲವೂ ಇರುತ್ತದೆ. ಕೆಲವು ಸಂದರ್ಭದಲ್ಲಿ ವಿನೋದ ಸಂಘರ್ಷವನ್ನುಂಟು ಮಾಡಬಹುದು. ವಿನೋದ ಅಥವ ಸಂಬಂಧ ಎಲ್ಲಾ ಸಂಬಂಧಿಗಳ ನಡುವೆಯೂ ನಡೆಯುವುದಿಲ್ಲ. ಬದಲಿಗೆ ಸೋದರ ಮಾವಂದಿರು–ಸೋದರ ಅಳಿಯ, ಸೋದರ ಅತ್ತೆಯಂದಿರು – ಸೊದರ ಅಳಿಯ ಹಾಗೂ ಭಾವ–ನಾದನಿಯರು, ಭಾವ–ಮೈದುನರು, ಅಜ್ಜ–ಅಜ್ಜಿ–ಮೊಮ್ಮಕ್ಕಳು ಮುಂತಾದವರುಗಳ ನಡುವೆ ತಮಾಷೆ ಮಾಡುತ್ತಾರೆ. ಅತ್ತೆ ಮಕ್ಕಳು, ಮಾವನ ಮಕ್ಕಳೊಂದಿಗೆ, ಬಾವ–ಮೈದುನರ ನಡುವೆ, ಅತ್ತಿಗೆ ನಾದಿನಿಯರ ನಡುವೆ ವಿನೋದ ಹಾಗೂ ಲೈಗಿಂಕ ವಿಷಯಗಳ ಬಗ್ಗೆ ತಮಾಷೆ ಮಾಡುವ ಹಾಗೂ ಹಾಸ್ಯಭರಿತವಾಗಿ ಸಲುಗೆಯಿಂದ ಮಾತನಾಡುವ ಸಂಬಂಧವನ್ನು ಹೊಂದಿರುತ್ತಾರೆ.

**ನಿಯಂತ್ರಿತ ಸಂಬಂಧಗಳು (Avoidance)**

ಪಣಿಯನ್ ಬುಡಕಟ್ಟು ಸಮುದಾಯದಲ್ಲಿ ಎಲ್ಲರೊಂದಿಗೆ ಸಲುಗೆಯಿಂದಿರಲು ಸಾಧ್ಯವಿಲ್ಲ. ಬದಲಿಗೆ ಕೆಲವು ಸಂಬಂಧಗಳಲ್ಲಿ ಅಂತರ ಕಾಯ್ದುಕೊಳ್ಳಬೇಕಾಗುತ್ತದೆ. ತಮಾಷೆ ಮಾಡುವುದಿರಲಿ ನೇರವಾಗಿ

ಮಾತನಾಡಲು ಕೂಡ ಹಿಂಜರಿಯುತ್ತಾರೆ. ಆ ರೀತಿಯ ಸಂಬಂಧಗಳೆಂದರೆ, ಮಾವ–ಸೊಸೆಯಿಂದ, ಅಳಿಯ–ಅತ್ತೆಯಿಂದ, ಹೆಂಡತಿಯ ಅಕ್ಕ, ಅತ್ತಿಗೆ–ಮೈದುನ ಮುಂತಾದ ಸಂಬಂಧಗಳಲ್ಲಿ ಇವರು ಒಟ್ಟಿಗಿರಲು ಇಷ್ಟಪಡುವುದಿಲ್ಲ.

**ವಿರಾಮ ಆಟಗಳು**

ಪಣಿಯನ್‌ರು ಹಿಂದೆ ವಿರಾಮದಲ್ಲಿ ಹಲವಾರು ಆಟಗಳನ್ನು ಆಡುವುದರ ಜೊತೆಗೆ ಹರಟುವುದು ಮಾಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಕ್ರಿಕೆಟ್, ವಾಲಿಬಾಲ್, ಪುಟ್‌ಬಾಲ್ ಆಟ ಆಡುವುದು ಮಾಡುತ್ತಾರೆ. ವಯಸ್ಸಾದವರು ಮಕ್ಕಳೊಂದಿಗೆ ಹಾಗೂ ದೊಡ್ಡವರೊಂದಿಗೆ ಹಳಿಗುಳಿಮಣೆ, ಗಟ್ಟೆಮಣೆ ಆಡುತ್ತಾರೆ. ಇತ್ತೀಚಿಗೆ ಮೊಬೈಲ್‌ನಿಂದಾಗಿ ಸಂಬಂಧಗಳ ನಡುವೆ ಸಡಿಲಿಕೆಯಾಗುತ್ತಿದೆ. ಮೊಬೈಲ್ ಗೀಳಿಗೆ ಬಿದ್ದಿರುವ ಯುವ ಸಮುದಾಯ ಬೆರೆಯುವುದಕ್ಕಿಂತ ಏಕಾಂಗಿಯಾಗಿರಲು ಇಷ್ಟಪಡುವುದು ಇತ್ತೀಚಿನ ದಿನಗಳಲ್ಲಿ ಗೋಚರಿಸುತ್ತಿದೆ.

**ಅಂತರ ಸಮುದಾಯದ ಸಂಬಂಧ**

ಪಣಿಯನ್‌ರು ತೋಟದ ಮಾಲೀಕರು ಹಾಗೂ ಇತರೆ ಬುಡಕಟ್ಟು ಸಮುದಾಯಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ. ಹಣದ ಅವಶ್ಯಕತೆಯಿದ್ದಾಗ ಅವರು ದುಡಿಯುವ ಜಮೀನಿನ ಮಾಲೀಕರ ಬಳಿ ಸಾಲ ಪಡೆದುಕೊಳ್ಳುತ್ತಾರೆ. ಕೆಲಸವಿಲ್ಲದ ಸಂದರ್ಭದಲ್ಲಿ ಇತರೆ ಬುಡಕಟ್ಟು ಸಮುದಾಯದವರೊಂದಿಗೆ ಕಿರು–ಉತ್ಪನ್ನಗಳನ್ನು ಸಂಗ್ರಹಿಸುವುದು ಮಾಡುತ್ತಾರೆ. ಇಂದಿಗೂ ಕೂಡ ಕೂಲಿಗಾಗಿ ಕೊಡವ, ಲಿಂಗಾಯಿತ, ಒಕ್ಕಲಿಗ ಸಮುದಾಯವನ್ನು ಅವಲಂಬಿಸಿದ್ದಾರೆ. ಕ್ಷೌರ ಮಾಡಿಸಲು ಸವಿತ ಸಮಾಜದವರನ್ನು ಅವಲಂಬಿಸಿರುವುದು ಕಂಡು ಬರುತ್ತದೆ. ಇವರು ಕೊಡವರು, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ಅಮ್ಮ ಕೊಡವರು, ಅಗಸರು, ಈಡಿಗರು, ಉಪ್ಪಾರರು, ಕಣಿಯರು, ಕಾಪಳರು, ಕುಡಿಯರು, ಕುರುಬರು, ಕುಂಬಾರರು, ಗೊಲ್ಲರು, ಗಾಣಿಗರು, ನಾಮದಾರಿ ಗೌಡರು, ಐರಿಗಳು, ಜೋಗಿಗಳು, ದರ್ಜಿಗಳು, ಬಣಜಿಗ, ಬೆಸ್ತ, ಬಂಟರಿಗಿಂತ ಕೆಳಗಿನವರು ಎಂದು ಭಾವಿಸಿಕೊಳ್ಳುತ್ತಾರೆ. ಜೇನುಕುರುಬರು, ಬೆಟ್ಟಕುರುಬರು, ಕುಡಿಯ/ಮಲೆಕುಡಿಯ, ಪಂಜಿರಿ ರು ಸಾಮಾಜಿಕವಾಗಿ ಸಮಾನರು ಎಂದು ಭಾವಿಸುತ್ತಾರೆ. ಇವರ ನಡುವೆ ಸೌಹಾರ್ದಯುತ ಸಂಬಂಧವಿರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಪಣಿಯನ್ ಬುಡಕಟ್ಟು ಸಮುದಾಯದವರು ಸಾಮಾಜಿವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಸಮುದಾಯವಾಗಿದೆ. ಅನಕ್ಷರತೆ, ಬಡತನ, ಶೋಷಣೆ, ಮೂಲಭೂತ ಸೌಲಭ್ಯಗಳ ಕೊರತೆ, ಕಡಿಮೆ ಕೂಲಿ, ಅಪೌಷ್ಟಿಕತೆ, ಅನಾರೋಗ್ಯ ಮುಂತಾದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಕೃಷಿ ಕೂಲಿ ಮತ್ತು ಕಾಫೀ ತೋಟದಲ್ಲಿ ದುಡಿಯುವ ಕಾರ್ಮಿಕರು ಲೈನ್‌ಮನೆಗಳಲ್ಲಿಯೇ ಉಳಿದುಕೊಳ್ಳುತ್ತಾರೆ. ಇವರಿಗೆ ಸ್ವಂತ ಸೂರಿರುವುದಿಲ್ಲ ಹಾಗೂ ವ್ಯವಸಾಯಕ್ಕೆ ಭೂಮಿಯೂ ಇರುವುದಿಲ್ಲ. ಪರ್ಯಾಯ ಮಾರ್ಗ ಕಾಣದೆ ತೋಟಗಳಲ್ಲಿಯೇ ದುಡಿಯಬೇಕಾದ ಅನಿವಾರ್ಯತೆಯಿದೆ. ಮಾಲೀಕರು ಇದ್ದನ್ನು ಸಾವಕಾಶವಾಗಿ ಬಳಸಿಕೊಂಡು ಕಡಿಮೆ ಕೂಲಿಗೆ ದುಡಿಸಿಕೊಳ್ಳುವುದು ಶೋಷಿಸುವುದು

ಸಾಮಾನ್ಯವೆಂಬಂತಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು ಕ್ರಮಕೈಗೊಂಡು ವಿಶೇಷ ಸವಲತ್ತು ಮತ್ತು ಅರಿವು ಮೂಢಿಸುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಬೋರಲಿಂಗಯ್ಯ ಹಿ.ಚಿ. ಮತ್ತು ಪ್ರಭಾಕರ ಎ. ಎಸ್. (2013). ಕರ್ನಾಟಕದ ಬುಡಕಟ್ಟುಗಳು. ಸಚಿತ್ರ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಗಂಗಾಧರ್ ಎಂ.ಆರ್ ಮತ್ತು ಮಂಜುನಾಥ ಬಿ.ಆರ್. (2018). ಬುಡಕಟ್ಟು ಸಮಾಜ ಮತ್ತು ಸಂಸ್ಕೃತಿ. ರಚನಾ ಪ್ರಕಾಶನ.
- ಹರೀಶ್ ಪಿ ಎನ್. (1992). ಎರವ ಸಂಸ್ಕೃತಿ. ಉಪಸಂಸ್ಕೃತಿಮಾಲೆ ಬುಡಕಟ್ಟುಗಳು, ಕರ್ನಾಟಕ ಸಾಹಿತ್ಯ ಅಕಾಡಮಿ.
- ಹರೀಶ್ ಪಿ.ಎನ್. (1988). *ಕೊಡಗಿನ ಯೆರವರು: ಒಂದು ಅಧ್ಯಯನ.* ಅಪ್ರಕಟಿತ ಸಂಶೋಧನಾ ಮಹಾ ಪ್ರಬಂಧ. ಮೈಸೂರು ವಿಶ್ವವಿದ್ಯಾನಿಲಯ.
- ಮಂಜುನಾಥ ಬಿ.ಆರ್. (2014). ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ. ಅಪ್ರಕಟಿತ ಪೌಢಪ್ರಬಂಧ, ಮೈಸೂರು ವಿವಿ.
- ಶ್ರೀನಿವಾಸ ಎಲ್. (2000). *ಪಂಜರಿ ಮತ್ತು ಪಣಿ ಯೆರವರ ಸಾಂಸ್ಕೃತಿಕ ಅಧ್ಯಯನ.* ಅಪ್ರಕಟಿತ ಸಂಶೋಧನಾ ಮಹಾ ಪ್ರಬಂಧ. ಕನ್ನಡ ವಿಶ್ವವಿದ್ಯಾಲಯ.
- Anathakrishna Iyer and Nanjundayya H V. (1931). The Mysore Tribes and Castes. Vol.IV, The Mysore Universit.
- Conner. (1870). Memoir of Codugu Survey: commonly written Koorg.: Central Jail Press.
- Connor. (1870). Memoirs of the Codugu Survey. Vol-II Central Jail Press.
- Das, B.K. (1987). The Yeravas of Kodagu. Census of India 1981. Series 9, Karnataka, Part-XI, Director of Census operations, Karnataka.
- Krishna lyer, L.A., (1948). The Coorg Tribes and Castes. Madras, Pages 8-14.
- Luiz A.A.D., (1963). The Tribes of Mysore.
- Mallikarjuna. B., (1983). A Descriptive Analysis of Yerava Language unpublished Doctoral Thesis submitted to the Karnatak University.
- Rao, K.L.N., (1951). Yeravas of Coorg. In the Tribes of India. Bharatiya Adimjati Sevak Sangh.
- Richter, G. (1887). Ethnographical compendium of the castes and tribes found in the province of Coorg with a short description of those peculiar to Coorg. Morning Star Press
- Thurston Edgar. (1909). Castes and Tribes of Southern India'. Volumes I and VI.